

بِسۡمِ اللّٰہِ الرَّحۡمٰنِ الرَّحِیۡمِ

# ವಕ್ಫ್ ಜದೀದ್ 61ನೇ ವರ್ಷಾರಂಭದ ಘೋಷಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **05–01–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಸತ್ಯವಿಶ್ವಾಸಿಗಳು ಆರ್ಥಿಕ ಬಲಿದಾನಗಳನ್ನು ನೀಡಬೇಕೆಂಬ ಬಗ್ಗೆ ಗಮನ ಹರಿಸುವುದರ ಕುರಿತು ಅನೇಕ ಪ್ರಸ್ತಾಪಗಳು ಪವಿತ್ರ ಖುರ್‌ಆನ್‌ನಲ್ಲಿವೆ. ಒಂದು ಸ್ಥಳದಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: وَمَا تُنۡفِقُوۡا مِنۡ خَیۡرٍ فَلِاَنۡفُسِکُمۡ **ವಮಾ ತುನ್‌ಫಿಕೂ ಮಿನ್‌ಖೈರಿನ್ ಫಲಿಅನ್‌ಫುಸಿಕುಮ್** ಅಲ್ಲಾಹನ ಮಾರ್ಗದಲ್ಲಿ ನೀವು ವೆಚ್ಚ ಮಾಡುವ ಉತ್ತಮ ಸಂಪತ್ತಿನ ಪ್ರತಿಫಲ ನಿಮಗೆಯೇ ಸಿಗುವುದು (2:273). ಅದರೊಂದಿಗೆ ಅಲ್ಲಾಹನು ಸತ್ಯವಿಶ್ವಾಸಿಗಳ ಚಿಹ್ನೆಯಾಗಿ ಹೀಗೆ ಹೇಳಿದ್ದಾನೆ. ಸತ್ಯವಿಶ್ವಾಸಿಗಳು ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕೋಸ್ಕರವಾಗಿಯೇ ಸಂಪತ್ತನ್ನು ಖರ್ಚು ಮಾಡುತ್ತಾರೆ. ಅಲ್ಲಾಹನು ಹೇಳುತ್ತಾನೆ: وَمَا تُنۡفِقُوۡنَ اِلَّا ابۡتِغَآءَ وَجۡہِ اللّٰہِ **ವಮಾ ತುನ್‌ಫಿಖೂನ ಇಲ್ಲಬ್ತಿಗಾಅ ವಜ್‌ಹಿಲ್ಲಾಹಿ** ಅಲ್ಲಾಹನ ಸಂತೃಪ್ತಿಗೋಸ್ಕರ ಹೊರತು ನೀವು ವ್ಯಯಿಸುವುದಿಲ್ಲವಷ್ಟೆ. (2:273). ಇದನ್ನು ಮನಗಂಡು ತಮ್ಮ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ವ್ಯಯಿಸುವವರು ಎಷ್ಟು ಭಾಗ್ಯಶಾಲಿಗಳಾಗಿದ್ದಾರೆ. ಇಂದಿನ ಕಾಲದಲ್ಲಿ ಅಲ್ಲಾಹನ ಅನುಗ್ರಹದಿಂದ ಲೋಕದಲ್ಲಿ ಅಹ್ಮದಿಯರ ಹೊರತು ಬೇರೆ ಯಾರೂ ಅಲ್ಲಾಹನ ಸಂತೃಪ್ತಿಗಳಿಸುವ ಯೋಚನೆ ಹೊಂದಿ ಸಾಂಪತ್ತಿಕ ಬಲಿದಾನ ಮಾಡುತ್ತಾ ಇಲ್ಲ. ಒಂದು ಜಮಾಅತ್ ಎಂಬ ನೆಲೆಯಲ್ಲಿ ಅಹ್ಮದಿಯಾ ಜಮಾಅತ್ ಮಾತ್ರ ಅಲ್ಲಾಹನ ಸಂತೃಪ್ತಿ ಗಳಿಸಲು ಬಡವರಿಗೆ ಮತ್ತು ಆವಶ್ಯಕತೆ ಇರುವವರಿಗೆ ಸಹಾಯ ಮಾಡುತ್ತಿದೆಯಲ್ಲದೆ ಧರ್ಮದ ಪ್ರಚಾರಕ್ಕೋಸ್ಕರ ಮತ್ತು ಇಸ್ಲಾಮ್ ಧರ್ಮದ ನೈಜ ಚಿತ್ರವನ್ನು ಲೋಕಕ್ಕೆ ತೋರಿಸಲಿಕ್ಕಾಗಿಯೂ ತನ್ನ ಮೇಲೆ ಭಾರ ಹೊರಿಸಿ ಸಾಂಪತ್ತಿಕ ಬಲಿದಾನಗಳನ್ನು ಅರ್ಪಿಸುತ್ತಿದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅಲ್ಲಾಹನು ಹೀಗೆ ಹೇಳಿದುದಾಗಿ ಒಂದು ಹದೀಸೆ ಖುದ್‌ಸಿಯಲ್ಲಿ ವರದಿಯಾಗಿದೆ ಅಲ್ಲಾಹನು ಹೇಳುತ್ತಾನೆ: ಓ ಆದಮ್ ಪುತ್ರ, ನೀನು ನಿನ್ನ ಸಾಂಪತ್ತಿಕ ಖಜಾನೆಯನ್ನು ನನ್ನ ಬಳಿ ನಿಕ್ಷೇಪಿಸಿ ಸಮಾಧಾನ ಚಿತ್ತನಾಗು. ಆಗ ಅಗ್ನಿಬಾಧೆಯುಂಟಾಗುವ ಅಪಾಯವಾಗಲಿ ನೀರಿನಲ್ಲಿ ಮುಳುಗಿ ಹೋಗುವ ಆಶಂಕೆಯಾಗಲಿ ಕಳ್ಳನು ಕದಿಯಬಹುದೆಂದು ಭಯವಾಗಲಿ ಇರಲಾರದು. ನಿನಗೆ ಅತಿಹೆಚ್ಚು ಅಗತ್ಯವಿರುವ ಒಂದು ಸಮಯದಲ್ಲಿ ನಾನು ಅದನ್ನು ನಿನಗೆ ಪೂರ್ಣವಾಗಿ ಹಿಂದಿರುಗಿಸುವೆನು.

ಆದುದರಿಂದ ನಾವು ಯಾವುದನ್ನು ಬಾಹ್ಯವಾಗಿ ಖರ್ಚು ಮಾಡುವುದೆಂದು ಭಾವಿಸುತ್ತಿರುವೆವೋ ಅದು ವಾಸ್ತವಿಕವಾಗಿ ಖರ್ಚು ಮಾಡುವುದಲ್ಲ, ಅದು ನಿಮ್ಮ ಎಕೌಂಟಿನಲ್ಲಿ ಜಮಾಯಿಸಲ್ಪಡುವ ಹಣವಾಗಿದೆ. ನಿಮಗೆ ಅದರ ಆವಶ್ಯಕತೆವುಂಟಾಗುವಾಗ ಅಲ್ಲಾಹನು ನಿಮಗೆ ಅದನ್ನು ಮರಳಿಸುವನು. ಇದೇ ರೀತಿ ಇನ್ನೊಂದು ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಹೇಳಿದ್ದಾರೆ: ಖಿಯಾಮತ್ ದಿನದಂದು ಲೆಕ್ಕಾಚಾರ ಮಾಡಿ ಮುಗಿಸುವ ತನಕದ ಕಾಲದಲ್ಲಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದವರ ಸ್ಥಿತಿ ಹೇಗಿರುವುದೆಂದರೆ ಅವರು ತಾವು ಅಲ್ಲಾಹನ ಮಾರ್ಗದಲ್ಲಿ ವ್ಯಯಿಸಿದ ತಮ್ಮ ಸಂಪತ್ತಿನ ನೆರಳಿನಡಿಯಲ್ಲಿರುವರು. ಅದರೊಂದಿಗೆಯೇ ಒಂದು ಶರತ್ತನ್ನು ಸಹ ಹೇಳಿದ್ದಾರೆ: ಅಲ್ಲಾಹನಿಗೆ ಕೊಳಕು ಸಂಪತ್ತು ಇಷ್ಟವಾಗುವುದಿಲ್ಲ. ಕೆಟ್ಟ ರೀತಿಯಲ್ಲಿ ಸಂಪಾದಿಸಿದ ಸಂಪತ್ತು ಅಲ್ಲಾಹನಿಗೆ ಇಷ್ಟಕರವಲ್ಲ. ಪರಿಶುದ್ಧವಾದ ರೀತಿಯಲ್ಲಿ ಸಂಪಾದಿಸಿದ ಹಣ ಮತ್ತು ದುಡಿಮೆಯಿಂದ ಸಂಪಾದಿಸಿದ ಹಣವನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದಾದರೆ ಅದು ಅವನಿಂದ ಅಂಗೀಕರಿಸಲ್ಪಡುವುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸಹಾಬರು ಯಾವ ರೀತಿಯಲ್ಲಿ ಸಾಂಪತ್ತಿಕ ತ್ಯಾಗ ಮಾಡಲು ಪ್ರಯತ್ನಿಸುತ್ತಿದ್ದರು ಎಂಬುದರ ಬಗ್ಗೆ ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಅಬೂ ಮಸ್‌ಊದ್ ಅನ್‌ಸಾರಿ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಸದಖ ನೀಡುವ ಬಗ್ಗೆ ಮತ್ತು ಸಾಂಪತ್ತಿಕ ತ್ಯಾಗ ಮಾಡುವ ಬಗ್ಗೆ ಆವಶ್ಯಪಡುವಾಗ ನಮ್ಮ ಪೈಕಿ ಕೆಲವರು ಪೇಟೆಗೆ ಹೋಗಿ ಅಲ್ಲಿ ದುಡಿದು ಸಂಪಾದಿಸಿದುದನ್ನು ಧಾರ್ಮಿಕ ಉದ್ದೇಶಕ್ಕೋಸ್ಕರ ಖರ್ಚುಮಾಡುತ್ತಿದ್ದರು. ಹಝ್ರತ್ ಅಬೂಬಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹು ಬಗ್ಗೆ ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಅವರು ಮುಸ್ಲಿಮರಾಗುವಾಗ ನಲ್ವತ್ತು ಸಾವಿರ ಅಶ್ರಫಿ ಹಣ ಅವರ ಬಳಿಯಲ್ಲಿತ್ತು. ಅದಲ್ಲದೆ ಅವರಿಗೆ ವ್ಯಾಪಾರ ಮತ್ತು ಭೂಸ್ವತ್ತು ಸಹ ಇತ್ತು. ಈ ಎಲ್ಲಾ ಸಂಪತ್ತನ್ನು ಧಾರ್ಮಿಕ ಉದ್ದೇಶಕ್ಕೋಸ್ಕರ ಖರ್ಚು ಮಾಡಲು ಅವರು ತೀರ್ಮಾನಿಸಿದರು ಮತ್ತು ಖರ್ಚು ಮಾಡುತ್ತಾ ಇದ್ದರು. ಹಿಜ್‌ರತ್ ಮಾಡುವ ಸಂದರ್ಭದಲ್ಲಿ ಅವರ ಕೈಯ್ಯಲ್ಲಿ ಬರೇ ಐನೂರು ಅಶ್ರಫಿ ಬಾಕಿಯಾಗಿ ಉಳಿದಿತ್ತು. ಅಂದಿನ ಕಾಲದ ಬಂಗಾರದ ಆ ಅಶ್ರಫಿಗಳ ಮೌಲ್ಯಮಾಪನ ಇಂದಿನ ಲೆಕ್ಕದಲ್ಲಿ ನಡೆಸುವುದಾದರೆ ಪ್ರಾಯಶಃ ಅಂದಾಜು ಹನ್ನೊಂದು, ಹನ್ನೆರಡು ಮಿಲಿಯನ್ ಪೌಂಡಿನಷ್ಟಾಗಬಹುದು. ಅಂದಿನ ಕಾಲದಲ್ಲಿ ಸಹಾಬರ ಸ್ಥಿತಿ ಹಾಗಿತ್ತು. ಯಾರ ಕೈಯಲ್ಲಿ ಹಣವಿರಲಿಲ್ಲವೋ ಅವರು ಶಾರೀರಿಕವಾಗಿ ದುಡಿದು ಆರ್ಥಿಕ ಬಲಿದಾನ ನೀಡುತ್ತಿದ್ದರು. ಯಾರ ಹತ್ತಿರ ಹಣವಿತ್ತು ಅವರು ತಮ್ಮ ಆರ್ಥಿಕ ಸಂಕಷ್ಟದ ಬಗ್ಗೆ ಚಿಂತಿಸದೆ ಅಲ್ಲಾಹನ ಮಾರ್ಗದಲ್ಲಿ ನಿಸ್ಸಂಕೋಚವಾಗಿ ಖರ್ಚು ಮಾಡುತ್ತಿದ್ದರು.

ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬರ ಪೈಕಿ ಒಬ್ಬರಾದ ಹಜ಼್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರು ಮಾಡಿದ ಆರ್ಥಿಕ ಬಲಿದಾನಗಳ ಕಥೆಗಳಿವೆ. ಅವರು ಅತ್ಯಂತ ಉನ್ನತ ಮಟ್ಟದಲ್ಲಿ ಸಾಂಪತ್ತಿಕ ಬಲಿದಾನ ನೀಡಿದ್ದರು. ಹಜ಼್ರತ್ ಉಮ್ಮೆ ನಾಸಿರ್‌ರವರ ಪಿತ ಖಲೀಫ ರಶೀದುದ್ದೀನ್ ಸಾಹಿಬರು ಮಾಡಿದ ಸಾಂಪತ್ತಿಕ ತ್ಯಾಗಗಳಿವೆ. ಅವರಿಗೆ ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದಗಳ ಬಗ್ಗೆ ತಿಳಿದಾಗ ಅವರು ತಕ್ಷಣ ಹೇಳಿದರು: ಇಷ್ಟು ದೊಡ್ಡ ವಾದವನ್ನು ಮಾಡುವವರು ಸುಳ್ಳುಗಾರ ಆಗಿರಲಾರರು. ಅವರು ಕೂಡಲೆ ಬೈಅತ್ ಮಾಡಿದರು. ಅವರು ಸಾಂಪತ್ತಿಕ ಬಲಿದಾನ ನೀಡುವುದರಲ್ಲಿ ಮುಂದೆ ಮುಂದೆ ಇದ್ದರು. ಅವರು ಡಾಕ್ಟರ್ ಮತ್ತು ಸರಕಾರಿ ಉದ್ಯೋಗಿ ಆಗಿದ್ದರು. ಅವರು ಬಹಳ ಸಂಪಾದಿಸುತ್ತಿದ್ದರು. ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅವರನ್ನು ತನ್ನ ಹನ್ನೆರಡು ಪ್ರಧಾನ ಶಿಷ್ಯ (ಹವಾರಿ)ಗಳಲ್ಲಿ ಸೇರಿಸಿದ್ದರು. ಹಜ಼್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಅವರ ಸಾಂಪತ್ತಿಕ ತ್ಯಾಗಗಳು ಎಷ್ಟು ಹೆಚ್ಚಾಗಿತ್ತೆಂದರೆ ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅವರಿಗೆ ಹೀಗೆ ಪ್ರಶಸ್ತಿಪತ್ರ ನೀಡಿದ್ದರು: ನೀವು ಜಮಾಅತಿಗೋಸ್ಕರ ಎಷ್ಟು ಸಾಂಪತ್ತಿಕ ಬಲಿದಾನ ನೀಡಿರುವಿರೆಂದರೆ ಇನ್ನು ಮುಂದೆ ನೀವು ಬಲಿದಾನ ನೀಡುವ ಆವಶ್ಯಕತೆಯೇ ಇಲ್ಲ.

ಗುರುದಾಸಪುರದಲ್ಲಿ ಮೊಕದ್ದಮೆ ನಡೆಯುತ್ತಿದ್ದ ಸಮಯದಲ್ಲಿ ಒಮ್ಮೆ ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಸಹಚರರೊಂದಿಗೆ ಹೀಗೆ ಅಪೇಕ್ಷಿಸಿದರು: ಖರ್ಚುಗಳು ವರ್ಧಿಸುತ್ತವೆ. ಮೊಕದ್ದಮೆಗೆ ಖರ್ಚು ಆಗುತ್ತಿದೆ. ಲಂಗರ್ ಖಾನದ ಖರ್ಚು ವರ್ಧಿಸುತ್ತಿದೆ. ಮಸೀಹ್ ಮೌಊದ್ ಅಲೈಹಿಸ್ಸಲಾಮರು ಗುರುದಾಸಪುರಕ್ಕೆ ಹೋಗಿ ಅಲ್ಲಿ ತಂಗುವ ಕಾರಣ ಅಲ್ಲಿಯೂ ಲಂಗರ್ ಜಾರಿಯಲ್ಲಿತ್ತು. ಖಾದಿಯಾನ್‌ನಲ್ಲೂ ಗುರುದಾಸಪುರದಲ್ಲೂ ಎರಡೂ ಕಡೆ ಲಂಗರ್ ಜಾರಿಯಲ್ಲಿತ್ತು. ಇದರಿಂದ ಖರ್ಚು ವರ್ಧಿಸುತ್ತದೆ. ಆದುದರಿಂದ ಚಂದದ ಆವಶ್ಯಕತೆ ಇರುವುದಾಗಿ ಹೇಳಿದರು. ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಆವಶ್ಯಕತೆ ಬಹಿರಂಗಗೊಳಿಸಿದ ದಿನವೇ ಹಜ಼್ರತ್ ರಶೀದುದ್ದೀನ್ ಸಾಹಿಬರಿಗೆ ಸಂಬಳ ದೊರೆತಿತ್ತು. ಆ ದಿನ ಅವರು ಕೂಡಲೆ ತನ್ನ ಸಂಬಳದ ಎಲ್ಲಾ ಹಣ ಚಂದವಾಗಿ ನೀಡಿದರು. ಅದು ನಾನೂರ ಐವತ್ತು ರೂಪಾಯಿಗಳಾಗಿದ್ದರೂ ಆ ಕಾಲದಲ್ಲಿ ಅದು ಬಹಳ ದೊಡ್ಡ ಸಂಖ್ಯೆಯಾಗಿತ್ತು. ಇಂದಿನ ಕಾಲದ ಲಕ್ಷಗಳಿಗೆ ಅದು ಸಮಾನವಾಗಿತ್ತು. ಆ ಎಲ್ಲಾ ಹಣವನ್ನು ಅವರು ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ರವಾನಿಸಿದರು. ಒಬ್ಬರು ಅವರೊಂದಿಗೆ ಹೇಳಿದ್ದರು: ಮನೆ ಖರ್ಚಿಗೆ ಸ್ವಲ್ಪ ಹಣ ಇಟ್ಟುಕೊಳ್ಳಿರಿ ಎಂದು. ಆಗ ಅವರು ಹೇಳಿದರು: ಅಲ್ಲಾಹನ ಮಸೀಹ್ ಧಾರ್ಮಿಕ ಖರ್ಚಿಗೆ ಹಣ ಆವಶ್ಯಕತೆ ಇದೆ ಎಂದು ಹೇಳುವಾಗ ನಾನು ಯಾವುದಕ್ಕೋಸ್ಕರ ಹಣವನ್ನು ಇಟ್ಟುಕೊಳ್ಳಲಿ.

ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ನನ್ನ ಜಮಾಅತಿನವರ ಪ್ರೀತಿ ಮತ್ತು ನಿಷ್ಠೆ ಬಗ್ಗೆ ಆಶ್ಚರ್ಯಪಡುತ್ತೇನೆ. ಅತ್ಯಂತ ಕಡಿಮೆ ಸಂಪಾದನೆಯನ್ನು ಮಾಡುವ ಮಿಯಾಂ ಜಮಾಲುದ್ದೀನ್, ಖೈರುದ್ದೀನ್ ಮತ್ತು ಇಮಾಮುದ್ದೀನ್ ಕಾಶ್ಮೀರೀ, ನನ್ನ ಗ್ರಾಮಕ್ಕೆ ಸಮೀಪವಾಗಿ ವಾಸಿಸುವ ಜನರಾಗಿದ್ದಾರೆ. ಈ ಮೂವರು ಬಡ ಸಹೋದರರು ಪ್ರಾಯಶಃ ದಿನಂಪ್ರತಿ ಮೂರಾಣೆ ನಾಲ್ಕಾಣೆಯನ್ನು ದುಡಿದು ಸಂಪಾದನೆ ಮಾಡುತ್ತಿದ್ದಾರೆ. ಆದರೆ ಅವರು ಮಾಸಿಕ ಚಂದವನ್ನು ಕ್ರಮಬದ್ಧವಾಗಿ ನೀಡುತ್ತಿದ್ದಾರೆ. ಅವರ ಸ್ನೇಹಿತ ಅಬ್ದುಲ್ ಅಝೀಝ್ ಪಟ್ವಾರಿಯ ನಿಷ್ಠೆ ಬಗ್ಗೆ ಸಹ ನನಗೆ ಆಶ್ಚರ್ಯವಾಗುತ್ತಿದೆ. ಅವರಿಗೆ ಸಂಪಾದನೆ ಕಡಿಮೆಯಾಗಿದ್ದರೂ ಒಂದು ದಿನ ಅವರು ನನಗೆ ನೂರು ರೂಪಾಯಿ ಚಂದವಾಗಿ ನೀಡಿದರು. ಅವರು ಹೇಳಿದರು ಈ ಹಣ ಅಲ್ಲಾಹನ ಮಾರ್ಗದಲ್ಲಿ ಖರ್ಚಾಗಲಿ ಎಂದು. ಆ ನೂರು ರೂಪಾಯಿಗಳನ್ನು ಆ ಬಡ ಮನುಷ್ಯ ಅನೇಕ ವರ್ಷಗಳ ಕಾಲ ಉಳಿಕೆಮಾಡಿ ಸಂಗ್ರಹಿಸಿರಬಹುದು. ಅವರಲ್ಲಿ ಅಲ್ಲಾಹನಿಗೋಸ್ಕರವಿದ್ದ ಉತ್ಸಾಹ ಅಲ್ಲಾಹನ ಸಂತೃಪ್ತಿಗಳಿಸಲು ಉತ್ತೇಜಿಸಿರಬಹುದು.

ಸಾಂಪತ್ತಿಕ ಬಲಿದಾನಗಳನ್ನು ನೀಡುವ ಈ ಕ್ರಮ ಅಲ್ಲಾಹನು ನೀಡಿದ ಆಜ್ಞೆಗಳಿಗೆ ಅನುಸಾರವಾಗಿದೆ. ಅಲ್ಲಾಹನ ಅನುಗ್ರಹದಿಂದ ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿನಲ್ಲಿ ಈ ದೃಶ್ಯಗಳು ಇಂದಿನ ಕಾಲದಲ್ಲಿ ಸಹ ಕಾಣಿಸುತ್ತವೆ. ಅವರಿಗೆ ಸಾಂಪತ್ತಿಕ ಬಲಿದಾನಗಳನ್ನು ಮಾಡುವ ಬಗ್ಗೆ ಅಲ್ಲಾಹನು ಎಂತಹ ತಿಳುವಳಿಕೆ ನೀಡಿದ್ದಾನೆಂದರೆ ಅಂತಹ ತಿಳುವಳಿಕೆ ಲೋಕದಲ್ಲಿ ಬೇರೆ ಯಾರಿಗೂ ಇರುವುದಿಲ್ಲ. ಇದರ ಅಸಂಖ್ಯಾತ ಉದಾಹರಣೆಗಳನ್ನು ನಾವು ಪ್ರತಿ ವರ್ಷ ಕಾಣುತ್ತಿದ್ದೇವೆ. ಸಂಪ್ರದಾಯ ಪ್ರಕಾರ ಜನವರಿ ತಿಂಗಳ ಪ್ರಥಮ ಖುತ್‌ಬದಲ್ಲಿ ವಕ್ಫೇ ಜದೀದ್ ಹೊಸ ವರ್ಷದ ಆರಂಭದ ಘೋಷಣೆ ಮಾಡಲಿಕ್ಕಿರುವುದರಿಂದ ವಕ್ಫೇ ಜದೀದ್‌ಗೆ ಸಾಂಪತ್ತಿಕ ಬಲಿದಾನ ನೀಡಿದವರ ಬಗ್ಗೆ ಕೆಲವು ಈಮಾನ್ ವರ್ಧಕ ಘಟನೆಗಳನ್ನು ವಿವರಿಸುವೆನು.

ಬುರ್ಕಿನಾಫಾಸೋ ದೇಶದ ಅಮೀರ್ ಸಾಹಿಬ್ ಬರೆಯುತ್ತಾರೆ: ನಮ್ಮ ದೇಶದ ಒಂದು ಜಮಾಅತ್, ಅದರ ಹೆಸರು ಕಾರೀಕಿ ಎಂದಾಗಿದೆ. ಆ ಪ್ರದೇಶದ ಸಮೀಪ ಆಪ್ಟಿಕ್ ಫೈಬರ್ ಕೇಬಲ್ ಅಳವಡಿಸುವ ಕೆಲಸ ಸರಕಾರ ನಡೆಸುತ್ತಿದೆ. ಒಂದು ಕಿಲೋಮೀಟರ್ ಗುಂಡಿ ತೋಡುವ ಕೆಲಸ ತಮಗೆ ನೀಡಬೇಕೆಂದು ಅಲ್ಲಿನ ಖುದ್ದಾಮ್ ಗುತ್ತಿಗೆದಾರನೊಂದಿಗೆ ಅಪೇಕ್ಷಿಸಿದರು. ಆ ಕೆಲಸ ದೊರೆತಾಗ ಖುದ್ದಾಮ್ ಒಟ್ಟಿಗೆ ಸೇರಿ ಆ ಕೆಲಸ ನಿರ್ವಹಿಸಿದರು. ಅವರಿಗೆ ಒಂದು ಮಿಲಿಯನ್ ಫ್ರಾಂಕ್ ಸೇಫ ಮಜೂರಿಯಾಗಿ ದೊರಕಿತು. ಅದು ಅಂದಾಜು ಒಂದು ಸಾವಿರದ ಇನ್ನೂರ ಐವತ್ತು ಪೌಂಡಿನಷ್ಟಾಗಿದೆ. ಅದನ್ನೆಲ್ಲಾ ಅವರು ವಕ್ಫೇ ಜದೀದ್ ಚಂದವಾಗಿ ನೀಡಿದರು. ಇಂತಹ ಉತ್ಸಾಹ ಅಹ್ಮದಿಯಾ ಜಮಾಅತಿನಲ್ಲಿ ಹೊರತು ಬೇರೆಲ್ಲಿಯೂ ಕಾಣಿಸಲಾರದು.

ಬುರ್ಕೀನಾಫಾಸೋ ದೇಶದವರೇ ಆದ ಒಬ್ಬ ಅಹ್ಮದಿ ತನ್ನ ಒಂದು ಸಂಭವ ಹೀಗೆ ವಿವರಿಸುತ್ತಾರೆ: ನಾನು ಒಂದು ಪ್ರವಾಸ ಹೊರಡುವ ಸಂದರ್ಭದಲ್ಲಿ ವಕ್ಫೇ ಜದೀದ್ ಚಂದದ ವರ್ಷ ಕೊನೆಗೊಳ್ಳಲಿತ್ತು. ನಾನು ಪ್ರಯಾಣ ಹೊರಡುವ ಮೊದಲು ನನ್ನ ಮಕ್ಕಳೊಂದಿಗೆ ಹೇಳಿದೆ, ಫಸಲು ಕೊಯ್ಲು ನಡೆಸಿದ ನಂತರ ಅದರ ಹತ್ತನೇ ಒಂದು ಭಾಗ ಚಂದವಾಗಿ ಕೊಡಿರಿ. ನಾನು ಹೊರಟುಹೋದ ನಂತರ ಫಸಲು ಕೊಯ್ದು ಮಕ್ಕಳು ಎಲ್ಲಾ ಧಾನ್ಯವನ್ನು ಮನೆಯೊಳಗೆ ತಂದಿರಿಸಿದರು. ಚಂದ ಕೊಡಲಿಲ್ಲ. ನಾನು ಮನೆಗೆ ಬಂದಾಗ ಇದು ನನಗೆ ತಿಳಿಯಿತು. ನಾನು ಹೇಳಿದೆ: ಎಲ್ಲಾ ಧಾನ್ಯವನ್ನು ಮನೆಯ ಹೊರಗೆ ಹಾಕಿ ಚಂದದ ಪಾಲನ್ನು ಬೇರೆಯಾಗಿ ಇರಿಸಿರಿ. ಮಕ್ಕಳು ಎಲ್ಲಾ ಧಾನ್ಯಗಳನ್ನು ಮನೆಯಿಂದ ಹೊರಗೆ ಹಾಕಿ, ಚಂದದ ಧಾನ್ಯ ಬೇರೆ ಇರಿಸಿ ಉಳಿದ ಧಾನ್ಯವನ್ನು ಮನೆಯೊಳಗೆ ತಂದಿರಿಸಿದರು. ನೋಡಿದಾಗ ಅದು ಮನೆಯೊಳಗೆ ಮೊದಲು ಇರಿಸಿದಾಗ ಇದ್ದಷ್ಟೇ ಇದ್ದುದನ್ನು ಕಂಡು ಆಶ್ಚರ್ಯಗೊಂಡರು. ಆಗ ನಾನು ನನ್ನ ಮಕ್ಕಳೊಂದಿಗೆ ಹೇಳಿದೆ: ಅಲ್ಲಾಹನು ನಿಮಗೆ ತೋರಿಸಿ ಕೊಟ್ಟಿರುವನು ಅವನ ಮಾರ್ಗದಲ್ಲಿ ಖರ್ಚುಮಾಡುವುದರಿಂದ ಸಂಪತ್ತಿನಲ್ಲಿ ಕೊರತೆ ಉಂಟಾಗುವುದಿಲ್ಲ ಅದು ವರ್ಧಿಸುತ್ತದೆ ಎಂದು. ಸಾವಿರಾರು ಮೈಲು ದೂರ ವಾಸಿಸುತ್ತಿರುವ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದವರ ಸ್ಥಿತಿ ಹೀಗಿದೆ.

ಚಂದದ ಅನುಗ್ರಹದಿಂದ ಕಷ್ಟ ಪರಿಹಾರವಾಗುತ್ತದೆ ಎಂಬುದಕ್ಕೆ ಸಂಬಂಧಿಸಿ ಒಂದು ಘಟನೆ ಹೀಗಿದೆ. ಐವರಿಕೋಸ್ಟ್ ದೇಶದ ಒಂದು ಜಮಾಅತ್, ಅದರ ಹೆಸರು ದಿಪಂಗೋ ಎಂದಾಗಿದೆ. ಅಲ್ಲಿನ ಒಬ್ಬ ಅಹ್ಮದಿ ಯಾಕೂಬ್ ಸಾಹಿಬ್ ಹೇಳುತ್ತಾರೆ: ನಾನು ಬಹಳ ಕಾಲದಿಂದ ಅಹ್ಮದಿಯಾಗಿದ್ದರೂ ಚಂದದ ವ್ಯವಸ್ಥೆಯಲ್ಲಿ ಸೇರಿರಲಿಲ್ಲ. ನನ್ನ ಜೀವಿತ ಆಗ ಕಷ್ಟಕರವಾಗಿತ್ತು. ಕೆಲವು ಸಾರಿ ಮಕ್ಕಳು ರೋಗಬಾಧಿತರಾಗುತ್ತಿದ್ದರು. ಬೆಳೆ ನಷ್ಟದ ಕಾರಣದಿಂದ ಕೆಲವು ಸಾರಿ ತೊಂದರೆಯಾಗುತ್ತಿತ್ತು. ನಾನು ಕಳೆದ ಮೂರು ವರ್ಷಗಳಿಂದ ವಕ್ಫೇ ಜದೀದ್ ಎಂಬ ಅನುಗ್ರಹಭರಿತ ಚಂದ ನೀಡಲು ತೊಡಗಿದ ನಂತರ ಅಲ್ಲಾಹನು ನನ್ನ ಜೀವಿತವನ್ನೇ ಬದಲಾಯಿಸಿದನು. ನನ್ನ ಮಕ್ಕಳು ಈಗ ಮೊದಲಿಗಿಂತ ಹೆಚ್ಚು ಆರೋಗ್ಯವಂತರಾಗಿದ್ದಾರೆ. ನನಗೆ ದೊರಕುವ ಬೆಳೆ ಸಹ ವರ್ಧಿಸುತ್ತಿದೆ.

ಅಲ್ಲಾಹನ ಸಂಪ್ರೀತಿ ಗಳಿಸಲು ಹೊಸ ಅಹ್ಮದಿಯರಲ್ಲಿ ಸಾಂಪತ್ತಿಕ ಬಲಿದಾನದ ಆತ್ಮ ಹುಟ್ಟುತ್ತಾ ಇದೆ. ಐವರಿಕೋಸ್ಟ್ ದೇಶದ ಝುಬ್‌ಲೂರ್ ಸಾಹಿಬ್ ಸ್ವಲ್ಪ ಸಮಯದ ಹಿಂದೆ ಕ್ರೈಸ್ತ ಧರ್ಮದಿಂದ ಅಹ್ಮದಿಯ್ಯತ್‌ಗೆ ಪ್ರವೇಶಿಸಿದರು. ಅವರು ತನ್ನ ಪಟ್ಟಣದ ಒಬ್ಬನೇ ಅಹ್ಮದಿಯಾಗಿದ್ದಾರೆ. ಅವರು ನನ್ನ ಖುತ್‌ಬಗಳನ್ನು ತಪ್ಪದೆ ಆಲಿಸುತ್ತಿದ್ದಾರೆ. ಜಮಾಅತಿನ ಕಾರ್ಯಕ್ರಮಗಳನ್ನೂ ಆಲಿಸುತ್ತಿದ್ದಾರೆ. ಅವರು ಬಹಳ ನಿಷ್ಠಾವಂತರಾಗಿದ್ದಾರೆ. ಅವರು ಈಮಾನ್‌ನಲ್ಲಿಯೂ ಬಹಳ ಅಭಿವೃದ್ಧಿಗಳಿಸಿದ್ದಾರೆ. ಅವರು ಬೈಅತ್ ಮಾಡಿದ ನಂತರ ಫ್ರೆಂಚ್ ಭಾಷೆಯಲ್ಲಿರುವ ಅಹ್ಮದಿ ಸಾಹಿತ್ಯ ಅಧ್ಯಯನ ಮಾಡಿದ್ದಾರೆ. ಈಗ ಉತ್ತಮ ದಾಈ ಇಲಲ್ಲಾಹ್ ಆಗಿದ್ದಾರೆ. ಅವರು ತನ್ನ ಗ್ರಾಮವನ್ನು ತ್ಯಜಿಸಿ ನಮ್ಮ ಜಮಾಅತ್ ಕೇಂದ್ರದ ಸಮೀಪ ವಾಸಿಸಿ ಇಸ್ಲಾಮ್ ಬಗ್ಗೆ ಹೆಚ್ಚು ಜ್ಞಾನಗಳಿಸುತ್ತಿದ್ದಾರೆ. ಅವರು ತನ್ನ ವಾಸ ಸ್ಥಳ ಬಿಟ್ಟು ಬಂದುದರಿಂದ ಅವರಿಗೆ ಕೆಲಸವಿರಲಿಲ್ಲ. ಅವರು ಕೆಲಸ ಹುಡುಕುತ್ತಿದ್ದರು. ಅವರ ಪತ್ನಿಗೆ ಸ್ವಲ್ಪ ಆದಾಯ ಸಿಗುತ್ತಿತ್ತು. ಅದರಿಂದ ಮನೆ ಖರ್ಚು ನಿಭಾಯಿಸುತ್ತಿದ್ದರು. ಅವರೊಂದಿಗೆ ಚಂದದ ಬಗ್ಗೆ ಅಪೇಕ್ಷಿಸಿದಾಗ ಅವರು ಕಷ್ಟದಲ್ಲಿದ್ದರೂ ಐದು ಸಾವಿರ ಫ್ರಾಂಕ್ ಸೇಫ ಚಂದವಾಗಿ ಕೊಟ್ಟು ಇದು ನನ್ನ ಮತ್ತು ನನ್ನ ಕುಟುಂಬದ ಚಂದ ಎಂದು ಹೇಳಿದರು. ನನ್ನ ಸ್ಥಿತಿ ಕೆಟ್ಟದಾಗಿದ್ದರೂ ನಾನು ಚಂದದ ಅನುಗ್ರಹದಿಂದ ವಂಚಿತನಾಗಲು ಇಚ್ಛಿಸುವುದಿಲ್ಲ ಎಂದು ಹೇಳಿದರು.

ಚಂದ ಕೊಡುವವರಿಗೆ ಹೇಗೆ ಮಾನಸಿಕ ನೆಮ್ಮದಿ ಸಿಗುತ್ತದೆ ಎಂಬುದರ ಬಗ್ಗೆ ಐವರಿಕೋಸ್ಟಿನ ನಮ್ಮ ಮುಬಲ್ಲಿಗ್ ಬರೆಯುತ್ತಾರೆ: ಬಂದೂಕೂ ನಗರವನ್ನು ಇಸ್ಲಾಮಿನ ಕೇಂದ್ರ ಎಂದು ಗಣಿಸಲಾಗುತ್ತದೆ. ಇಲ್ಲಿ ಅನೇಕ ಮೌಲವಿಗಳಿದ್ದಾರೆ. ಇಲ್ಲಿ ಅಬ್ದುರ್ರಹ್ಮಾನ್ ಸಾಹಿಬ್ ಎಂಬವರು ಬೈಅತ್ ಮಾಡಿದರು. ಅವರಿಗೆ ಒಂದು ಕಿರು ಪುಸ್ತಕ ಮೂಲಕ ಜಮಾಅತಿನ ಪರಿಚಯವಾಗಿತ್ತು. ಅವರು ಹೇಳುತ್ತಾರೆ: ನಾಲ್ಕು ವರ್ಷಗಳ ಹಿಂದೆ ನಾನು ಕ್ರೈಸ್ತ ಧರ್ಮದಿಂದ ಕುಟುಂಬ ಸಮೇತ ಮುಸ್ಲಿಮನಾದೆನು. ಆದರೆ ನನಗೆ ಸಮಾಧಾನವಿರಲಿಲ್ಲ. ಆದರೆ ಜಮಾಅತ್ ಬಗ್ಗೆ ತಿಳಿದು ಮಿಶನ್ ಹೌಸ್‌ಗೆ ಹೋಗಿ ಕೆಲವು ಪ್ರಶ್ನೆಗಳನ್ನು ಕೇಳಿದಾಗ ನನ್ನ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಲಭಿಸಿತು. ಹಾಗೆ ನಾನು ಬೈಅತ್ ಮಾಡಿದೆ. ನಾನು ಡಿಸೆಂಬರ್‌ನಲ್ಲಿ ಬೈಅತ್ ಮಾಡಿದೆ. ಮುಬಲ್ಲಿಗರು ವಕ್ಫೇ ಜದೀದ್ ಚಂದದ ಮಹತ್ವವನ್ನು ವಿವರಿಸಿ ಚಂದ ನೀಡಲು ಅಪೇಕ್ಷಿಸಿದರು. ನನ್ನ ಜೇಬಿನಲ್ಲಿ ಆಗ ಎರಡು ಸಾವಿರ ಫ್ರಾಂಕ್ ಸೇಫ ಇತ್ತು. ಅದರಲ್ಲಿ ಒಂದು ಸಾವಿರವನ್ನು ನಾನು ಆಗಲೇ ಚಂದವಾಗಿ ಕೊಟ್ಟೆನು. ಅಲ್‌ಹಮ್‌ದುಲಿಲ್ಲಾಹ್ ಆ ದಿನದಿಂದ ನನ್ನ ಜೀವಿತವನ್ನೇ ಅಲ್ಲಾಹನು ಬದಲಾಯಿಸಿದನು. ಅಲ್ಲಾಹನು ನನ್ನ ಕೆಲಸದಲ್ಲಿ ಅನುಗ್ರಹ ನೀಡಿದನು. ನಾನು ಎಲ್ಲಿ ಕೆಲಸ ಮಾಡುತ್ತಿರುವೆನೋ ಅಲ್ಲಿ ಅಧಿಕಾರಿಗಳ ಸಮೇತ ಎಲ್ಲರೂ ನನಗೆ ಗೌರವ ನೀಡುತ್ತಿದ್ದಾರೆ. ನನಗೆ ಸೀಮಿತ ಆದಾಯವಿದ್ದರೂ ಎಷ್ಟು ಅನುಗ್ರಹವಿದೆ ಎಂದರೆ ನಾನು ಸುಖವಾಗಿ ಜೀವಿಸುತ್ತಿದ್ದೇನೆ. ಅವರು ಬೈಅತ್ ಮಾಡಿದ ನಂತರ ಮೊದಲನೆಯ ದಿನದಿಂದಲೇ ಚಂದದ ವ್ಯವಸ್ಥೆಯ ಸ್ಥಿರವಾದ ಭಾಗವಾಗಿದ್ದಾರೆ.

ಈಜಿಪ್ಟಿನ ಒಬ್ಬ ಅಹ್ಮದಿ ಅಬ್ದುರ್ರಹ್ಮಾನ್ ಸಾಹಿಬ್ ಹೇಳುತ್ತಾರೆ: ಕಳೆದ ವಾರ ಜುಮುಅದ ದಿನ ನನ್ನ ಜೇಬಿನಲ್ಲಿ ನೂರು ಈಜಿಪ್ಸಿಯನ್ ಪೌಂಡ್ ಇತ್ತು. ಅದರಿಂದ ಐವತ್ತು ಪೌಂಡ್ ಚಂದವಾಗಿ ಕೊಟ್ಟು ಉಳಿದ ಹಣ ಪ್ರಯಾಣದ ಖರ್ಚು ಮತ್ತಿತರ ಆವಶ್ಯಕತೆಗಳಿಗೋಸ್ಕರ ಇರಿಸಿದೆ. ನಾನು ನನ್ನ ಮನೆಯಿಂದ ಬಹಳ ದೂರದಲ್ಲಿ ಕೆಲಸ ಮಾಡುತ್ತಿದ್ದೇನೆ. ಅಲ್ಲಿ ನನಗೆ ಅಲ್ಲಾಹನ ಹೊರತು ಬೇರೆ ಯಾರೂ ಸಹಾಯಕರಿಲ್ಲ. ಮರುದಿನ ನನಗೆ ಹೀಗೆ

ತಿಳಿಸಲಾಯಿತು. ಸಾಮಾನ್ಯವಾಗಿ ತಡವಾಗಿ ಬರುತ್ತಿದ್ದ ಸಂಬಳ ಈ ಸಾರಿ ಬೇಗ ಬಂದಿದೆ ಎಂದು. ನಾನು ಎರಡು ದಿನ ಕಳೆದ ನಂತರ ಸಂಬಳ ಪಡೆಯಲು ಹೋದಾಗ ಸಂಬಳ ಅರುವತ್ತು ಶೇಕಡಾ ಹೆಚ್ಚುಮಾಡಲಾಗಿದೆ ಎಂದು ತಿಳಿಯಿತು. ಮುಂದಿನ ಜುಮುಅ ದಿನ ಈ ಹೆಚ್ಚುವರಿ ಸಂಬಳದ ಅರ್ಧ ಭಾಗ ಅಲ್ಲಾಹನ ಮಾರ್ಗದಲ್ಲಿ ಕೊಡಬೇಕೆಂದು ನಿರ್ಧರಿಸಿದೆ. ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಅಭಿರುಚಿ ವರ್ಧಿಸುವಂತೆ ಪ್ರಾರ್ಥಿಸಿರಿ.

ಭಾರತದ ಇನ್ಸ್‌ಪೆಕ್ಟರ್ ಸಲೀಮ್ ಖಾನ್ ಸಾಹಿಬ್ ಬರೆಯುತ್ತಾರೆ: ಅವರು ಗುಜರಾತ್‌ನಲ್ಲಿ ಒಂದು ಜಮಾಅತ್‌ಗೆ ಹೋದಾಗ ಒಬ್ಬರಿಗೆ ಫೋನ್ ಮಾಡಿ ಒಂದು ಗಂಟೆಯೊಳಗೆ ಅವರ ಬಳಿಗೆ ಹೋಗುವುದಾಗಿ ತಿಳಿಸಿದರು. ಒಂದು ಗಂಟೆಯ ನಂತರ ಅವರಲ್ಲಿಗೆ ಹೋದಾಗ ಅಲ್ಲಿ ನಾವು ಮಾತನಾಡುತ್ತಿರುವಾಗ ಇಬ್ಬರು ಬಂದು ಮಾತನಾಡಿ ಅವರ ರೆಫ್ರಿಜರೇಟರ್ ತೆಗೆದುಕೊಂಡು ಹೋದರು. ಇನ್ಸ್‌ಪೆಕ್ಟರ್ ಕೇಳಿದರು ಇದೇನು ವಿಷಯ ಎಂದು. ಆಗ ಆ ಅಹ್ಮದಿ ಹೇಳಿದರು: ನೀವು ಒಂದು ಗಂಟೆಯೊಳಗೆ ಬರುವುದಾಗಿ ತಿಳಿಸಿದಾಗ ನನ್ನ ಕೈಯಲ್ಲಿ ಹಣವಿರಲಿಲ್ಲ. ಆದುದರಿಂದ ರೆಫ್ರಿಜರೇಟರ್ ಮಾರಾಟ ಮಾಡಿದೆ. ಇನ್ಸ್‌ಪೆಕ್ಟರ್ ಹೇಳಿದರು: ನೀವು ಅಷ್ಟು ವೇಗವಾಗಿ ಹೀಗೆ ಮಾಡಬೇಕಾಗಿರಲಿಲ್ಲ. ನೀವು ಹಣವನ್ನು ಇಟ್ಟುಕೊಳ್ಳಿರಿ ಎಂದು ಹೇಳಿದರು. ಆಗ ಆ ಅಹ್ಮದಿ ಹೇಳಿದರು: ನಮ್ಮ ಬಳಿಗೆ ಮರ್ಕಸ್‌ನಿಂದ ಒಬ್ಬರು ಬಂದಾಗ ಅವರು ಬರಿಗೈಯಿಂದ ಹೋಗಬೇಕೆಂದು ನಾವು ಇಚ್ಛಿಸುವುದಿಲ್ಲ. ಫ್ರಿಜ್ ನಾವು ಇನ್‌ಶಾಅಲ್ಲಾಹ್ ಪುನಃ ಖರೀದಿಸುವೆವು ಎಂದು ಹೇಳಿದರು. ಅಲ್ಲಾಹನು ಅವರ ಸಂಪತ್ತಿನಲ್ಲಿ ಅನುಗ್ರಹ ನೀಡಲಿ. ಆ ಅಹ್ಮದಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ. ಮೇಸ್ತ್ರಿ ಕೆಲಸ ಮಾಡುತ್ತಿದ್ದಾರೆ. ಅವರು ಸಾಂಪತ್ತಿಕ ಕೊರತೆ ಅನುಭವಿಸುತ್ತಿದ್ದರೂ ತ್ಯಾಗ ಮಾಡಲು ಹಿಂಜರಿಯುವುದಿಲ್ಲ.

ಇದೇ ರೀತಿ ಭಾರತದ ವಕ್ಫೇ ಜದೀದ್ ಇನ್ಸ್‌ಪೆಕ್ಟರ್ ಮುನವ್ವರ್ ಸಾಹಿಬ್ ಬರೆಯುತ್ತಾರೆ: ಉತ್ತರ ಪ್ರದೇಶದ ಸಾಂಧನ್ ಜಮಾಅತ್‌ಗೆ ಸೇರಿದ ಒಬ್ಬ ಅಹ್ಮದಿಯ ಬಳಿಗೆ ವಕ್ಫೇ ಜದೀದ್ ಚಂದದ ವಸೂಲಿಗೆ ಹೋದಾಗ ಅವರು ಹೇಳಿದರು, ಇಂದು ಹಣವಿಲ್ಲ ನಾಳೆ ಬನ್ನಿರಿ ಎಂದು. ಮರುದಿನ ಅವರ ಮನೆಗೆ ಹೋದಾಗ ಹಣದ ವ್ಯವಸ್ಥೆ ಆಗಿಲ್ಲ ಎಂದು ಅವರು ಹೇಳಿದರು. ಆಗ ಅವರ ಸಮೀಪ ನಿಂತಿದ್ದ ಅವರ ಚಿಕ್ಕ ಮಗಳು ನಮ್ಮ ಮಾತು ಆಲಿಸುತ್ತಿದ್ದಳು. ಅವಳು ಹೇಳಿದಳು: ನೀವು ನನಗೆ ಚಳಿಗಾಲದಲ್ಲಿ ಶೂ ಖರೀದಿಸಿ ಕೊಡುವುದಾಗಿ ವಾಗ್ದಾನ ಮಾಡಿದ್ದಿರಿ. ನೀವು ಅದಕ್ಕೋಸ್ಕರ ತೆಗೆದಿರಿಸಿದ ಹಣವನ್ನು ನನಗೆ ಕೊಡಿರಿ. ಆ ಬಾಲಿಕೆ ಹಟಮಾಡಿ ತನ್ನ ತಂದೆಯವರಿಂದ ಆ ಹಣ ವಸೂಲು ಮಾಡಿದಳು ಮತ್ತು ಅದನ್ನು ವಕ್ಫೇ ಜದೀದಿನ ಚಂದಾ ಆಗಿ ನೀಡಿದಳು. ಶೂ ಅನಂತರ ಸಹ ಖರೀದಿಸಬಹುದು ಈಗ ಮೊದಲು ಚಂದ ತೆಗೆದುಕೊಳ್ಳಿರಿ ಎಂದು ಹೇಳಿದಳು. ಅದೇ ರೀತಿ ಭಾರತದ ವಕ್ಫೇ ಜದೀದ್ ಇನ್ಸ್‌ಪೆಕ್ಟರ್ ಫರೀದ್ ಸಾಹಿಬ್ ಹೇಳುತ್ತಾರೆ: ನಾನು ನವೆಂಬರ್‌ನಲ್ಲಿ ಉತ್ತರಪ್ರದೇಶದಲ್ಲಿ ವಕ್ಫೇ ಜದೀದ್ ವಸೂಲಿ ಬಗ್ಗೆ ಪ್ರಯಾಣ ಮಾಡುತ್ತಾ ಇದ್ದಾಗ ಮೀರಠ್‌ನಲ್ಲಿದ್ದ ಅಹ್ಮದಿಯ ಒಂದು ಮನೆಗೆ ಹೋದೆನು. ಅವರು ಅನೇಕ ವರ್ಷಗಳಿಂದ ಜಮಾಅತ್‌ನೊಂದಿಗೆ ಸಂಬಂಧ ಹೊಂದಿರಲಿಲ್ಲ. ಅವರ ಮನೆಗೆ ಹೋಗಿ ಸಾಂಪತ್ತಿಕ ತ್ಯಾಗದ ಬಗ್ಗೆ ಗಮನ ಹರಿಸಿದಾಗ ಅವರು ಹೇಳಿದರು: ನಾವು ವಕ್ಫೇ ಜದೀದ್ ಮಾತ್ರವಲ್ಲ ಎಲ್ಲಾ ಚಂದಗಳ ವ್ಯವಸ್ಥೆಯಲ್ಲಿ ಸೇರಲು ಬಯಸುತ್ತೇವೆ. ಅವರು ಲಾಝಿಮೀ ಚಂದಗಳ ಬಜೆಟ್ ಸಹ ಬರೆಯಿಸಿದರು. ತಹ್‌ರೀಕ್ ಜದೀದ್, ಅನ್‌ಸಾರುಲ್ಲಾಹ್, ಖುದ್ದಾಮುಲ್ ಅಹ್ಮದಿಯಾ, ಲಜ್‌ನ ಮೊದಲಾದವುಗಳ ಚಂದದ ಬಜೆಟ್ ಸಹ ಬರೆಯಿಸಿದರು. ಚಂದ ವಕ್ಫೇ ಜದೀದ್ ಆಗಿ ಹದಿನೈದು ಸಾವಿರ ರೂಪಾಯಿಗಳನ್ನು ತಕ್ಷಣ ಪಾವತಿಸಿದರು. ಈ ರೀತಿ ವಕ್ಫೇ ಜದೀದಿನ ಅನುಗ್ರಹದ ಮೂಲಕ ಒಂದು ಕುಟುಂಬ ಅಹ್ಮದಿಯಾ ಜಮಾಅತ್‌ನೊಂದಿಗೆ ತನ್ನ ಸಂಬಂಧ ಪುನಃ ಸ್ಥಾಪಿಸಿತು. ನಾನು ಮೊದಲು ಸಹ ಅನೇಕ ಸಾರಿ ಹೇಳಿದ್ದೇನೆ. ನಮ್ಮಿಂದ, ನಮ್ಮ ಕಾರ್ಯಕರ್ತರಿಂದ ಬಹಳ ಉದಾಸೀನತೆ ತಲೆದೋರುತ್ತದೆ. ಅನೇಕ ಜಮಾಅತ್‌ಗಳೊಂದಿಗೆ ಸಂಪರ್ಕ ಸ್ಥಾಪಿಸುವುದಿಲ್ಲ. ಕೆಲವು ಸಾರಿ ದೀರ್ಘಕಾಲ ಸಂಬಂಧ ಸ್ಥಾಪಿಸುವುದಿಲ್ಲ. ಆದುದರಿಂದ ಸಂಪೂರ್ಣವಾಗಿ ಜಮಾಅತ್ ವ್ಯವಸ್ಥೆ ಸಕ್ರಿಯವಾಗಬೇಕು. ಮತ್ತು ಜನರೊಂದಿಗೆ ಸಂಪರ್ಕವಿರಿಸಬೇಕು.

ನಾನು ಕೆಲವು ಘಟನೆಗಳನ್ನು ಮಾತ್ರ ವಿವರಿಸಿದ್ದೇನೆ. ಧಾರ್ಮಿಕ ಕಾರ್ಯಕ್ಕೋಸ್ಕರ ಸಾಂಪತ್ತಿಕ ತ್ಯಾಗ ಮಾಡುವವರ ಬಗ್ಗೆ ಅವು ತಿಳಿಸುತ್ತವೆಯಲ್ಲದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆ, ಅಹ್ಮದಿಯಾ ಜಮಾಅತಿನ ಸತ್ಯತೆ ಮತ್ತು ಅಲ್ಲಾಹನಿಂದ ಅದು ಸ್ಥಾಪಿತವಾದ ಬಗ್ಗೆ ಒಂದು ಸಾಕ್ಷ್ಯಾಧಾರವೂ ಆಗಿದೆ. ಅಹ್ಮದಿಯರ ಈಮಾನ್ ವರ್ಧಿಸುತ್ತಾ ಇರುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನ ಸಂಪ್ರೀತಿ ಗಳಿಸಲು ಯಾವಾಗಲೂ ಬಲಿದಾನಗಳು ವರ್ಧಿಸುತ್ತಾ ಇರುವಂತೆ ಅಲ್ಲಾಹನು ಅನುಗ್ರಹಿಸಲಿ – ಆಮೀನ್.

ವಕ್ಫೇ ಜದೀದ್ 60ನೇ ವರ್ಷ ಡಿಸೆಂಬರ್ 31ಕ್ಕೆ ಕೊನೆಗೊಂಡಿದೆ. ಜನವರಿ ದಿನಾಂಕ ಒಂದರಿಂದ ಹೊಸವರ್ಷ ಪ್ರಾರಂಭವಾಗಿದೆ. ಈ ವರ್ಷ ಜಾಗತಿಕ ಅಹ್ಮದಿಯಾ ಜಮಾಅತ್ ಒಟ್ಟಾರೆ 88 ಲಕ್ಷ 62 ಸಾವಿರ ಪೌಂಡ್ ಸಾಂಪತ್ತಿಕ ಬಲಿದಾನ ನೀಡಿದೆ. ಇದು ಕಳೆದ ವರ್ಷಕ್ಕಿಂತ ಎಂಟು ಲಕ್ಷ ನಲ್ವತ್ತೆರಡು ಸಾವಿರ ಪೌಂಡ್ ಹೆಚ್ಚಿಗೆ ಇದೆ – ಅಲ್‌ಹಮ್‌ದುಲಿಲ್ಲಾಹ್. ಪಾಕಿಸ್ಥಾನವನ್ನು ಹೊರತುಪಡಿಸಿ ಬ್ರಿಟನ್ ಪ್ರಥಮ ಸ್ಥಾನದಲ್ಲಿದೆ. ದ್ವಿತೀಯ ಸ್ಥಾನ ಜರ್ಮನಿಗೆ, ಅಮೇರಿಕ ಮೂರನೆಯ ಸ್ಥಾನ ಪಡೆದಿವೆ. ಕೆನಡ ನಾಲ್ಕನೆಯ ಸ್ಥಾನ, ಹಿಂದೂಸ್ಥಾನ ಐದನೆಯ ಸ್ಥಾನ, ಆಸ್ಟ್ರೇಲಿಯಾ ಆರನೆಯ ಸ್ಥಾನ, ಮಧ್ಯಪೂರ್ವದ ಒಂದು ದೇಶ ಏಳನೆಯ ಸ್ಥಾನದಲ್ಲಿದೆ. ಇಂಡೋನೇಶಿಯಾ ಎಂಟನೆಯ ಸ್ಥಾನದಲ್ಲಿದೆ. ಮಧ್ಯಪೂರ್ವದ ಇನ್ನೊಂದು ದೇಶ ಒಂಭತ್ತನೆಯ ಸ್ಥಾನ ಹಾಗೂ ಘಾನ ಹತ್ತನೆಯ ಸ್ಥಾನದಲ್ಲಿದೆ. ಘಾನ ಈ ವರ್ಷ

ಬಹಳ ಪ್ರಗತಿ ಗಳಿಸಿದೆ. ಈ ವರ್ಷ ಕೆನಡ ಸಹ ಬಹಳ ಪ್ರಗತಿ ಗಳಿಸಿದೆ. ಆಫ್ರಿಕ ದೇಶಗಳಲ್ಲಿ ನೈಜೀರಿಯಾ ಪ್ರಗತಿ ಗಳಿಸಿದೆ. ಸಿಯೆರ್ರಾಲಿಯೋನ್ ಶೇಕಡಾ 45, ಕೆಮರೂನ್ ದೇಶ ಶೇಕಡಾ 45 ಪ್ರಗತಿ ಗಳಿಸಿದೆ. ಘಾನ ಶೇಕಡಾ 24ರಷ್ಟು ಹೆಚ್ಚು ಚಂದ ಕಳೆದ ವರ್ಷಕ್ಕಿಂತ ವಸೂಲಿ ಮಾಡಿದೆ.

ಆವಶ್ಯಕವಾದುದೇನೆಂದರೆ ಚಂದಕೊಡುವವರ ಸಂಖ್ಯೆ ವರ್ಧಿಸಬೇಕು. ಅಲ್ಲಾಹನ ಅನುಗ್ರಹದಿಂದ ಈ ವರ್ಷ ವಕ್ಫೇ ಜದೀದ್ ಚಂದ ಕೊಡುವವರ ಸಂಖ್ಯೆ ಹದಿನಾರು ಲಕ್ಷಕ್ಕಿಂತ ಹೆಚ್ಚಿಗೆ ಇದೆ. ಹೊಸದಾಗಿ ಸೇರಿದವರ ಸಂಖ್ಯೆ ಎರಡು ಲಕ್ಷದ ಅರುವತ್ತೆಂಟು ಸಾವಿರವಾಗಿದೆ. ಹೊಸದಾಗಿ ಚಂದ ಕೊಡುವವರ ಸಂಖ್ಯೆಗೆ ಅನುಸಾರವಾಗಿ ನೈಜೀರಿಯಾ ಪ್ರಥಮ ಸ್ಥಾನದಲ್ಲಿವೆ. ಅನಂತರ ಸಿಯೆರ್ರಾಲಿಯೋನ್, ನೈಜರ್, ಬೆನಿನ್, ಮಾಲಿ, ಕೆಮರೂನ್, ಐವರಿಕೋಸ್ಟ್, ಸೆನೆಗಾಲ್, ಬುರ್ಕಿನಾಫಾಸೋ, ಗ್ಯಾಂಬಿಯಾ, ಗಿನಿಬಸಾವೋ, ಕೆನ್ಯಾ, ತೆಂಝಾನಿಯಾ, ಝಿಂಬಾಬ್ವೇ, ಅನುಕ್ರಮವಾಗಿ ಇವೆ.

ಹಿಂದೂಸ್ಥಾನದ ರಾಜ್ಯಗಳಲ್ಲಿ ಕೇರಳ ಪ್ರಥಮ ಸ್ಥಾನದಲ್ಲಿದೆ. ಅನಂತರ ಅನುಕ್ರಮವಾಗಿ ಜಮ್ಮುಕಾಶ್ಮೀರ, ತೆಲಂಗಾಣ, ಕರ್ನಾಟಕ, ತಮಿಳುನಾಡು, ಒಡಿಶ, ವೆಸ್ಟ್‌ಬಂಗಾಳ್, ಪಂಜಾಬ್, ಉತ್ತರಪ್ರದೇಶ, ಮಹಾರಾಷ್ಟ್ರ. ಅದೇ ರೀತಿ ಚಂದ ವಸೂಲಿಯಲ್ಲಿ ಹಿಂದೂಸ್ಥಾನದ ಜಮಾಅತ್‌ಗಳಲ್ಲಿ ಪ್ರಥಮಸ್ಥಾನದಲ್ಲಿ ಕೇರಳದ ಕೋಝಿಕ್ಕೋಡ್ ಇದೆ. ಅನಂತರ ಅನುಕ್ರಮವಾಗಿ ಹೈದರಾಬಾದ್, ಪತ್ತಪಿರಿಯಂ, ಖಾದಿಯಾನ್, ಕೊಲ್ಕತ್ತ, ಬೆಂಗಳೂರು, ಕಣ್ಣೂರ್ ಟೌನ್, ಪಯಂಗಾಡಿ, ಕರುಳಾಯಿ, ಹಾಗೂ ಕರುನಾಗಪಳ್ಳಿ ಆಗಿವೆ.

ಸಾಂಪತ್ತಿಕ ತ್ಯಾಗ ಮಾಡುವ ಎಲ್ಲರ ಸಂಪತ್ತಿನಲ್ಲೂ ಸಂತಾನದಲ್ಲಿಯೂ ಅಲ್ಲಾಹನು ಅಪರಿಮಿತ ಅನುಗ್ರಹಗಳನ್ನು ದಯಪಾಲಿಸಲಿ. ಅವರ ಈಮಾನ್ ಮತ್ತು ನಿಷ್ಠೆ ವರ್ಧಿಸಲಿ. ಪ್ರತಿಯೊಬ್ಬರು ತಮ್ಮ ನಡೆನುಡಿಗಳನ್ನು ಅಲ್ಲಾಹನ ಸಂಪ್ರೀತಿಗೋಸ್ಕರ ಕಾರ್ಯನಿರತವಾಗುವಂತೆ ಮಾಡಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 05-01-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon